ಶ್ರೀ ಕಡಿದಾಳ್ ಮಂಜಪ್ಪ.—ಖಂಡಿತವಾಗಿ ಮಾಡುತ್ತೇವೆ. ಈಗಾಗಲೇ ಮಾಡಿಯೇ ಇದ್ದೇವೆ.

ಶ್ರೀ ಎಚ್. ಕೆ. ನಿದ್ದಯ್ಯ.—ತಮ್ಮ ಇಲಾಖಾ ಅಧಿಕಾರಿಗಳು ಈ ವಿಚಾರದಲ್ಲಿ ಸರಿಯಾಗಿ ಸರ್ಕಾರದ ಆಜ್ಞೆಗನುಸಾರವಾಗಿ ನಡೆದುಕೊಳ್ಳುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ವಿಚಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲು ಮಾಡುತ್ತೇವೆ. ಅವರಿಗೆಲ್ಲಾ ಖಚಿತವಾದ ತಿಳಿವಳಿಕೆಗಳನ್ನು ಈಗಾಗಲೇ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಕಳೆದ ಅಧಿವೇಶನದಲ್ಲಿ ಈ ಸಭೆಯಲ್ಲೇ ಈ ಪ್ರಶ್ನೆಯಲ್ಲಿ ಅಡಕವಾಗಿರತಕ್ಕಂಥ ವಿಚಾರದ ಬಗ್ಗೆ ಒಂದು ನಿರ್ಣಯ ಚರ್ಚೆಗೆ ಬಂದು ಅದು ತೀರ್ಮಾನವಾಗಿರತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನನಗೂ ಗೊತ್ತಿದೆ. ಅದರ ಬಗ್ಗೆ ನೂಕ್ತ ಸಲಹೆಕೊಡಲು P.S.C. ಗೆ ಕಳುಹಿಸಲಾಗಿದೆಯೆಂದು ಈ ಹಿಂದೆಯೇ ಈ ಮಾನ್ಯ ಸಭೆಗೆ ಅರಿಕೆ ಮಾಡಿಕೊಂಡಿದ್ದೆನು. ಆದರೆ ಈ ಸಂಬಂಧವಾಗಿ ಆ P.S.C. ಅವರ ಒಪಿನಿಯರ್ ಇನ್ನೂ ಬಂದಿಲ್ಲ. ಆದಾಗ್ಯೂ ಆ ನಿರ್ಣಯದಲ್ಲಿ ಏನು ತತ್ವ ಅಡಕವಾಗಿತ್ತೋ ಅದರಂತೆಯೇ ಕೆಲಸವನ್ನು ನಡೆಸಬೇಕೆಂದು ಆ P.S.C. ಅವರಿಗೂ ಮತ್ತು ಇಲಾಖಾ ಮೊಖ್ತೇಸರರಿಗೂ ತಿಳಿವಳಿಕೆ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಆದರೆ ಅವರು ತಮ್ಮ ಆಜ್ಞೆಗಳಿಗೆ ಬದ್ಧರಾಗಿ ನಡೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಹಾಗಾದರೆ ಇಲ್ಲಿಯವರೆಗೂ ತಮ್ಮ ಆಜ್ಞೆಗನುಸಾರವಾಗಿಯೇ ನಡೆದಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಈ ಹೊಸ ಆಜ್ಞೆಯನ್ನು ಅವರಿಗೆ ಇತ್ತೀಚೆಗೆ ಕಳುಹಿಸಿದ್ದೇವೆ. ಆದರೆ ಅವರು ಇಷ್ಟುಬೇಗ ಇದರ ಬಗ್ಗೆ ಅನಕ್ಕೆ ಕೋರಿಸಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಈ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೇ ಒಂದು ಸಂಬಳ, ಇತರ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೇ ಒಂದು ರೀತಿ ಸಂಬಳ ಹೀಗೆ ಒಂದು ವ್ಯತ್ಯಾಸವನ್ನು ಈ ಸಂಬಳಗಳಲ್ಲಿ ಏತಕ್ಕೆ ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಈ ಸಂಬಳದ ವಿಚಾರವನ್ನು ಹಿಂದೆಯೇ ನಿಗದಿ ಮಾಡಿದ್ದರು. ಈಗ ಹೊಸದಾಗೇನೂ ಈ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೆ ಸಂಬಳವನ್ನು ಕಡಮೆಯಾಗಿ ಕೊಡಬೇಕೆಂದು ನಾವೇನೂ ಮಾಡಿಲ್ಲ. ಅದು ಹಿಂದೆ ಯಾವ ರೀತಿಯಿತ್ತೋ ಈಗಲೂ ಅದೇ ರೀತಿಯಾಗಿ ನಡೆದುಕೊಂಡು ಬರುತ್ತಿದೆ.

ಶ್ರೀ ಟಿ. ಹನುಮಯ್ಯ.—ಹೀಗೆ ಅವರಿಗೆ ಕಡಮೆ ಸಂಬಳ ಕೊಡುವುದು ತಮಗೆ ತೃಪ್ತಿಕರವಾಗಿದೆಯೇ ?

(ಉತ್ತರವಿಲ್ಲ.)

"Mirase" to Village Officers.

Q.—205. **Sri T. HANUMAIYA** (Hiriyur—Scheduled Castes).—

Will the Government be pleased to state :—

(*a*) the number of Patels, Shanbhogs, Thoties and Talaries in the State (districtwar and talukwar) ;

(*b*) whether there is any system of "Mirase" in the State ; if so, a statement of demand, collection and balance for the State (districtwar and talukwar) may kindly be furnished ?

A.—**Sri Kadidal MANJAPPA** (Minister for Revenue and Public Works).—

(*a*) Please see the Statement appended below.

(*b*) Yes. D. C. B. particulars are not readily available.

Statement showing the number of Patels, Shanbhogs, Thoties and Talaries in the State

Names of Taluks			*Patels*	*Shanbhogs*	*Thoties*	*Talaries*
Bangalore District.—						
1. Bangalore North	...	...	126	54	113	56
2. Bangalore South	...	...	168	98	...	...
3. Doddaballapur	...	...	248	139	177	374
4. Devanahalli	...	...	189	114	116	92
5. Hosakote	...	...	170	129	365	363
6. Anekal	...	...	182	145	179	179
7. Nelamangala	...	...	189	104	200	249
8. Ramanagaram	...	...	113	61	176	29
9. Channapatna	...	...	115	64	210	156
10. Kanakapura	...	...	234	85	230	168
11. Magadi	...	...	254	122	210	156
	Total	...	1,988	1,115	...	...

STATEMENT—(*contd.*)

Names of Taluks		*Patels*	*Shanbhogs*	*Thotties*	*Talaries*
Kolar District.—					
1. Kolar	...	280	157	283	276
2. Mulbagal	...	303	168	192	291
3. Srinivasapur	...	244	188	299	265
4. Malur	...	267	140	178	89
5 Bangarpet	...	304	132	394	243
6 Chickballapur	...	155	109	115	152
7 Siddlaghatta	...	164	107	211	195
8. Chintamani	...	347	158	322	301
9. Gauribidnur	...	153	131	258	268
10. Bagepalli	...	135	72	87	126
11. Gudibanda	...	63	47	35	47
	Total ...	2,415	1,409	...	...
Tumkur District.—					
1. Tumkur	...	324	118	295	384
2. Kunigal	...	308	81	248	54
3. Gubbi	...	389	119	356	232
4. Tiptur	...	220	79	220	220
5. Chiknaikanahally	...	225	68	134	128
6. Turuvekere	...	254	61	188	38
7. Madhugiri	...	224	96	144	378
8. Sira	...	298	79	243	243
9. Koratagere	...	203	93	115	105
10. Pavagada	...	123	82	60	116
	Total ...	2,559	872	...	...
Mysore District.—					
1. Mysore	...	127	61	299	42
2. Krishnarajanagar	...	194	60	347	10
3. Hunsur	...	194	49	194	...
4. Periyapatna	...	170	438	198	42
5. Heggaddevankote	...	241	47	161	48
6. Nanjangud	...	155	107	189	6
7. Chamarajanagar	...	169	123	329	38
8. T.-Narasipur	...	129	82	260	2
9. Gundlupet	...	155	74	305	25
10. Yelandur	...	28	15	50	25
	Total ...	1,532	656	...	...

(SRI KADIDAL MANJAPPA.)

STATEMENT—(*contd.*)

Names of Taluks	*Patels*	*Shanbhogs*	*Thoties*	*Talaries*
Mandya District.—				
1. Mandya	225	63	290	150
2. Maddur	142	68	350	64
3. Malavalli	168	61	241	11
4. Pandavapura	172	57	501	...
5. Srirangapatna	88	50	129	30
6. Krishnarajapet	284	84	441	50
7. Nagamangala	390	82	441	50
Total ...	1,469	465	...	...
Hassan District.—				
1. Hassan	370	95	346	91
2. Holenarsipur	210	55	184	177
3. Alur	286	54	307	21
4. Arasikere	350	76	33	97
5. Arakalgud	259	80	201	85
6. Manjarabad	213	56	281	...
7. Belur	381	72	89	27
8. Channarayapatna	414	104	331	43
Total ...	2,483	592	...	...
Chickmagalur District.—				
1. Chickmagalur	184	85	154	146
2. Mudigere	138	32	72	...
3. Kadur	304	86	224	150
4. Narasimharajapura	27	9	4	...
5. Koppa	105	41	...	...
6. Sringeri	13	3	...	...
Total ...	771	256	...	...
Shimoga District.—				
1. Shimoga	134	35	47	89
2. Bhadravathi	117	32	56	98
3. Channagiri	221	51	81	92
4. Honnali	159	46	108	103
5. Thirthahalli	247	65	...	...
6. Sagar	145	66	...	21
7. Hosanagar	209	64	...	3
8. Sorab	216	63	...	237
9. Shikaripur	166	118	81	164
Total ...	1,614	540	...	...

STATEMENT—(*concld.*)

Names of Taluks	*Patels*	*Shanbhogs*	*Thoties*	*Talaries*
Chitaldrug District.—				
1. Chitaldrug	179	60	183	183
2. Challakere	173	68	142	142
3. Hiriyur	138	40	...	130
4. Molakalmuru	87	29	180	130
5. Jagalur	159	35	95	126
6. Davangere	170	63	160	160
7. Harihar	85	43	83	83
8. Holalkere	192	49	165	200
9. Hosadurga	220	54	16	178
Total ...	1,403	439	...	...
Bellary District.—				
1. Bellary	81	70	136	92
2. Hospet	43	38	68	55
3. Hadagalli	63	48	94	74
4. Harapanahalli	64	50	88	77
5. Kudligi	72	56	83	83
6. Sandur	44	25	34	54
7. Mallapuram Sub-Taluk ...	29	21	34	52
Total ...	...	...	...	...

ಶ್ರೀ ಟಿ. ಹನುಮಯ್ಯ.—ತಾವು ಇಲ್ಲಿ ನನ್ನ ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ಈ ಪಟೇಲ್ ಶ್ಯಾನುಭೋಗರುಗಳಿಗೆ ಮಾತ್ರ ಜುಂಲಾಸಂಖ್ಯೆಯನ್ನು ತೋರಿಸಿದ್ದೀರಿ. ಆದರೆ ಈ ತೋಟಿ ತಳವಾರರಿಗೆ ಹಾಗೆ ಒಟ್ಟು ಸಂಖ್ಯೆಯನ್ನು ತೋರಿಸಿಲ್ಲ. ಇದಕ್ಕೆ ಕಾರಣ ಹಾಗೆ ಒಟ್ಟು ಸಂಖ್ಯೆಯನ್ನು ತೋರಿಸದರೆ ಇವರು ಬಹಳ ಜಾಸ್ತಿಯಾಗಿ ಕಾಣುತ್ತಾರೆಂಬ ಅಭಿಪ್ರಾಯದಿಂದ ಅದನ್ನು ಕೈಬಿಟ್ಟಿರೋ! ಅಥವಾ ಟೋಟಲ್ ಮಾಡಲು ಸಾಧ್ಯವಿಲ್ಲವೋ!

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಇದು ಕ್ಲೆರಿಕಲ್ ಮಿಸ್ಟೇಕ್, ಟೋಟಲ್‌ಮಾಡಲು ಸಾಧ್ಯವಿದೆ.

ಶ್ರೀ ಟಿ. ಹನುಮಯ್ಯ.—ಈ ಮಿರಾಸೆ ಪದ್ಧತಿ ನಂಸ್ಥಾನದಲ್ಲಿ ಜಾರಿಯಲ್ಲದೆ ಎಂದು ಹೇಳಿದ್ದೀರಿ; ಮತ್ತು ಹೀಗೆ ಮಿರಾಸೆ ವಸೂಲ್ಮಾಡುವುದು ಸರ್ಕಾರದ ಕಾನೂನಿನಲ್ಲೂ ಕೂಡ ಇರುತ್ತೆಂದು ಹೇಳೋಣವಾಗಿದೆ. ಆದರೆ ಹಾಗೆ ಇದನ್ನು ನಂಸ್ಥಾನಾದ್ಯಂತವೂ ವಸೂಲ್ಮಾಡಲು ತಾವು ಏನು ಏರ್ಪಾಡುಗಳನ್ನು ಮಾಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅವಕ್ಕೆಲ್ಲಾ ಸೂಕ್ತ ಏರ್ಪಾಡುಗಳನ್ನು ಮಾಡಲಾಗಿದೆ.

ಶ್ರೀ ಟಿ. ಹನುಮಯ್ಯ.—ಹಾಗಿದ್ದರೆ ಈ ಡಿ.ಸಿ.ಬಿ. ಲೆಕ್ಕ ಗೊತ್ತಾಗುವುದಿಲ್ಲ ಎಂದು ಏತಕ್ಕೆ ಹೇಳಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಆದರೆ ಈ ಮಿರಾಸೆ ಬಗ್ಗೆ ಇಲ್ಲಿಯತನಕ ಈ ಡಿ.ಸಿ.ಬಿ.-ಲೆಕ್ಕಗಳನ್ನಿಡತಕ್ಕಂಥ ಪದ್ಧತಿ ಬಂದಿಲ್ಲ. ಹುಜೂರ್ ಜಮಾಬಂದಿ ಕಾಲದಲ್ಲಿ ಈ ಬಗ್ಗೆ ಎಲ್ಲೆಲ್ಲಿ ಮಿರಾಸೆ ಸರಿಯಾಗಿ ವಸೂಲಾಗಿದೆ, ಎಲ್ಲೆಲ್ಲಿ ವಸೂಲಾಗಿಲ್ಲ ಎಂಬತಕ್ಕ ಅಂತಗಳನ್ನೆಲ್ಲಾ ತನಿಖೆಮಾಡಲಾಗುತ್ತದೆ. ಆಗ ಯಾರು ಯಾರು ಕೊಟ್ಟಿರುವುದಿಲ್ಲವೋ ಅವರಬಗ್ಗೆ ಸೂಕ್ತಕ್ರಮಗಳನ್ನು ಕೈಗೊಂಡು ಅದನ್ನು ಕೊಡಿಸತಕ್ಕ ಏರ್ಪಾಡು ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಹೀಗೆ ಇವರ ಖಚಿತವಾದ ಸಂಖ್ಯೆ ಎಷ್ಟು, ಇವರಿಗೆ ಪಾವತಿಯಾಗದೆ ನಿಂತು ಬಂದಿರುವ ಮಿರಾಸೆ ಎಷ್ಟು ಎಂಬುದರ ಬಗ್ಗೆ ಇನ್ನು ಹತ್ತು ದಿವಸಗಳೊಳಗಾಗಿಯಾದರೂ ತರಿಸಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದಷ್ಟು ಪ್ರಯತ್ನಮಾಡುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಪಟೇಲ್ ಶ್ಯಾನುಭೋಗರು ಪೋಟಿಗೆ ತೆಗೆದುಕೊಳ್ಳತಕ್ಕದ್ದರ ಬಗ್ಗೆ ತಾವೇನಾದರೂ ಒಂದು ಸಂಖ್ಯೆಯನ್ನು ಇಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವುಗಳಿಗೆ ಕ್ರಮವಾದ ಲೆಕ್ಕವಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಆ ಲೆಕ್ಕಗಳನ್ನು ಒದಗಿಸುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಶ್ನೆ ಬಂದಾಗ ನೋಡೋಣ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—ನ್ಯಾಮಿ, ನಮ್ಮ ತರೀಕೆರೆ ತಾಲ್ಲೂಕನ್ನು ಈ ಪಟ್ಟಿಯಲ್ಲೇ ಕೈಬಿಡಲಾಗಿದೆ. ಕಾರಣವೇನು ? ಅಲ್ಲಿ ಈ ಪಟೇಲ್ ಶ್ಯಾನುಭೋಗರುಗಳಿಲ್ಲ ಎಂದು ತಮ್ಮ ಭಾವನೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಸಕಾಲಕ್ಕೆ ಬಾರದಿಹೋದ ಕಾರಣ ಅದನ್ನು ಕೈಬಿಡಲಾಗಿದೆಯೆಂದು ತೋರುತ್ತದೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—ಹಾಗೆ ಪೂರ್ಣವಾಗಿ ವಿವರಗಳು ಬಾರದಿರುವಾಗ ತಾವೇಕೆ ಇದನ್ನು ಸಭೆಯಮುಂದೆ ಚರ್ಚೆಗೆ ತಂದಿರಿ !

ಶ್ರೀ ಕಡಿದಾಳ್ ಮಂಜಪ್ಪ.—ಬಂದಿರುವುದನ್ನು ಇಟ್ಟಿದ್ದೇವೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—ಅಲ್ಲಿ ಪಟೇಲ್ ಶ್ಯಾನುಭೋಗರು ಇದ್ದಾರೋ ಇಲ್ಲವೋ ?

ಶ್ರೀ ಕಡಿದಾಳ್ ಮಂಜಪ್ಪ.—ಇದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಈ ಪಟೇಲ್ ಶ್ಯಾನುಭೋಗರುಗಳಿಗೆ ಈ ಪ್ರೋಟಿಗೆ ವರಮಾನ ಒಂದುವಿನಾಮತ್ತೆ ಯಾವ ವರಮಾನವೂ ಇರುವುದಿಲ್ಲ ಅನ್ನುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಉಂಬಳಿ ಜಮೀನು ಸಹ ಇದೆ.

ಶ್ರೀ ಯು. ಎಂ. ಮಾದಪ್ಪ.—ಶ್ಯಾನುಭೋಗರಿಗೆ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೂ ಇದೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ಇವರಿಗೆ ಬೇರೆ ಯಾವ ಸಂಪಾದನೆಯೂ ಇಲ್ಲದಿರುವುದರಿಂದ ಇವರು ಆಗಾಗ್ಗೆ, ಅನೇಕ ಕಷ್ಟಗಳಿಗೀಡಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಮಾಡತಕ್ಕ ಕೆಲಸಕ್ಕೆ ಸರ್ಕಾರದವರು ಸಾಕಷ್ಟು ಪ್ರತಿಫಲವನ್ನು ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ನಮ್ಮ ಸಂಸ್ಥಾನದಲ್ಲಿ ಬಳ್ಳಾರಿಯಲ್ಲಿರುವಂತೆ ಇವರಿಗೆ ಮಾಸಾಶನ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂಸ್ಥಾನಗಳಲ್ಲಿ ಹಾಗೆ ಮಾಡಿದ್ದಾರೆ. ಬೊಂಬಾಯಿ ಪ್ರಾಂತ್ಯದಲ್ಲಿ ಹಾಗೆ ಕೊಡುತ್ತಿದ್ದಾರಂತೆ.

ಅಧ್ಯಕ್ಷರು.—ಬಳ್ಳಾರಿಯಲ್ಲೂ ಸಹ ಆ ಪದ್ಧತಿಯಿದೆ.

ಶ್ರೀ ಯು. ಎಂ. ಮಾದಪ್ಪ.—ನಮ್ಮ ಗುಂಡ್ಲು ಪೇಟೆ ತಾಲ್ಲೂಕಿನಲ್ಲೂ ಆ ಪದ್ಧತಿಯಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಯು. ಎಂ. ಮಾದಪ್ಪ.—ತಾವು ಎಲ್ಲರಿಗೂ ಅದೇ ರೀತಿ ಕೊಡುವುದಕ್ಕೆ ಪ್ರಯತ್ನಪಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಸ್ವಶ್ನೆಯನ್ನು ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನೋಡಬೇಕಾಗಿದೆ. ಆದ್ದರಿಂದ ಇದನ್ನು ಆಗುತ್ತದೆಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತೋಟಿತಳವಾರರಿಗೆ ಮಿರಾಸೆ ಕೊಡಲಲ್ಲವೆಂದು ದೂರು ಬಂದಿಲ್ಲವೆ !

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೋ ಒಂದೆರಡು ಕಡೆ ಬಂದರೆ, ಅದನ್ನು ಸರಿಪಡಿಸುತ್ತಾರೆ.

ಶ್ರೀ ವಿ. ಮಸಿಯಪ್ಪ.—ಹಿರಿಯೂರು ತಾಲ್ಲೂಕಿನಲ್ಲಿ ತೋಟಿತಳವಾರರಿಲ್ಲವೆಂದು ಅಲ್ಲಿ ಕಂದಾಯ ವಸೂಲಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲೊಂದೇ ಸ್ಥಳದಲ್ಲಲ್ಲ, ಸಂಸ್ಥಾನದ ಇನ್ನೂ ಅನೇಕ ಕಡೆಗಳಲ್ಲಿಲ್ಲ ; ಆದರೂ ಕೆಲಸ ನಡೆಯಾಗಿ ನಡೆಯುತ್ತಿದೆ.

ಶ್ರೀ ಕೆ. ಪ್ರಭಾಕರ್.—ಗ್ರಾಮಾನ್ಯಕರರ ಗೋಳು, ಅಥವಾ ಪ್ರಶ್ನೆ ಸರ್ಕಾರದ ಮುಂದೆ ಎಷ್ಟೋ ವರ್ಷದಿಂದಿದೆ. 1945 ನೆಯ ಇಸವಿಯಲ್ಲಿ ಒಂದು ಸಮಿತಿ ನೇಮಕಮಾಡಿ, ಅದು ಶಿಫಾರಸನ್ನು ಮಾಡಿ, ಅದನ್ನು ಸರ್ಕಾರದವರು ಒಪ್ಪಿಕೊಂಡು ಆಜ್ಞೆಮಾಡಿದ್ದಾರೆ ; ಈಗಲಾದರೂ ಮಿರಾಸೆ ಸರಿಯಾಗಿ ಸಂದಾಯವಾಗಿದೆಯೆ ಎಂಬ ಬಗ್ಗೆ ರೆವಿನ್ಯೂ ಕಮೀಷನರಿಂದ ಒಂದು ವರದಿಯನ್ನು ಈ ಅಧಿವೇಶನ ಮುಗಿಯುವುದರಲ್ಲಿ ತರಿಸುತ್ತೀರಾ ?

Sri Kadidal MANJAPPA.—I will try.

ಶ್ರೀ ಡಿ. ಎಂ. ಗೋವಿಂದರಾಜು.—ಅವರು ಸರ್ಕಾರಕ್ಕೂ ಜನರಿಗೂ ಬಹಳ ಸಹಕಾರಿಗಳಾಗಿರುವುದು ತಮಗೆ ಗೊತ್ತಿದೆಯೆ ?

Mr. SPEAKER.—That is a matter of opinion.

ಶ್ರೀ ಡಿ. ಎಂ. ಗೋವಿಂದರಾಜು.—ಅವರಿಗೆ ಸಹಾಯಮಾಡುವುದು ಸರ್ಕಾರದ ಆಲೋಚನೆಯಲ್ಲಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

Officers of the Sales Tax Department.

Q.—323. **Sri K. PUTTASWAMY** (Srirangapatna).—

Will the Government be pleased to state :—

(*a*) the number of officers drawn from the Revenue Department to the Sales-tax Department and their cadre ;

(*b*) the number of Probationers that were taken for the Sales-tax Department;

(*c*) the number of such Probationers that have been promoted as Sales-tax Officers ;

(*d*) whether they are aware that the continuance of the officials of the Revenue Department in the Sales-tax Department has affected prospects of Sales-Tax Probationers ?

A.—**Sri Kadidal MANJAPPA** (Minister for Revenue and Public Works).—

(*a*) Seven, two of whom are holding senior duty posts; the others are in the cadre of Assistant Commissioners.

(*b*) Nineteen since the year 1948.

(*c*) Six.